## ಕರ್ನಾಟಕ ಸರ್ಕಾರ

ಸಂ:ಆಇ 410 ವೆಚ್ಚ-12/2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:05.07.2022

## ಸುತ್ತೋಲೆ

ವಿಷಯ : ರಾಜ್ಯದ ಕೆಲವು ಸಂಗ್ರಹಣಾ ಪ್ರಾಧಿಕಾರಗಳು ಮಾದರಿ ಟೆಂಡರ್ ದಾಖಲೆಗಳ ಬದಲಾಗಿ PWG Form 65 ಅನ್ನು ಬಳಕೆ ಮಾಡುತ್ತಿರುವ ಕುರಿತು.

ಉಲ್ಲೇಖ : (1) ಸರ್ಕಾರದ ಆದೇಶ ಸಂ:FD 9 PCL 2004 (I), dt:06.08.2005.

(2) ಸರ್ಕಾರದ ಆದೇಶ ಸಂ:FD 4 PCL 2008, dt:14.10.2008.

*****

ರಾಜ್ಯದ ನೀರಾವರಿ ನಿಗಮಗಳು, ನಿಗಮ ಮತ್ತು ಮಂಡಳಿಗಳು, ಮುಂತಾದ ಸಂಗ್ರಹಣಾ ಪ್ರಾಧಿಕಾರಗಳು ಕಾಮಗಾರಿಗಳ ಟೆಂಡರ್ ಕರೆಯುವ ಸಂದರ್ಭದಲ್ಲಿ ಸರ್ಕಾರದಿಂದ ನೀಡಲಾಗಿರುವ ಮಾದರಿ ಟೆಂಡರ್ ದಾಖಲೆಗಳ ಬದಲಿಗೆ PWG Form 65 ನ್ನು ಬಳಕೆ ಮಾಡುತ್ತಿರುವುದು ತಿಳಿದುಬಂದಿರುತ್ತದೆ. ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಕಾಮಗಾರಿಗಳ ಟೆಂಡರ್‌ಗೆ ಸಂಬಂಧಿಸಿದಂತೆ ಮಾದರಿ ಟೆಂಡರ್ ದಾಖಲೆಗಳನ್ನು ನೀಡಲಾಗಿದೆ. ಮುಂದುವರೆದು, ಉಲ್ಲೇಖ (2) ರಲ್ಲಿನ ಸರ್ಕಾರಿ ಆದೇಶ ಸಂ:FD 4 PCL 2008, ದಿನಾಂಕ:14.10.2008 ರಲ್ಲಿ ಇನ್ನು ಮುಂದೆ ಮಾದರಿ ಟೆಂಡರ್ ದಾಖಲೆಗಳನ್ನು ಮಾತ್ರ ಬಳಕೆ ಮಾಡುವಂತೆ ಸೂಚಿಸುತ್ತಾ, 'The PWG Form 65 'will be discontinued' ಎಂದು ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಸರ್ಕಾರದಿಂದ ನೀಡಲಾಗಿರುವ ಮಾದರಿ ಟೆಂಡರ್ ದಾಖಲೆಗಳು ಮತ್ತು ಕಾಲಕಾಲಕ್ಕೆ ಹೊರಡಿಸಲಾಗಿರುವ ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳನ್ವಯವೇ ಟೆಂಡರ್ ದಾಖಲೆಗಳನ್ನು ಕಡ್ಡಾಯವಾಗಿ ಸಿದ್ದಪಡಿಸಿ ಟೆಂಡರ್ ಕರೆಯುವಂತೆ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳಿಗೆ ತಿಳಿಸಲಾಗಿದೆ.

ಕಾಂತಮ್ಮ ಎನ್.ಎಂ

**(ಕಾಂತಮ್ಮ ಎನ್.ಎಂ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಇವರಿಗೆ:

ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.